## ಅಧ್ಯಾಯ-೪
# ಕೃಷಿ ಹಾಗೂ ನೀರಾವರಿ

ಮೈಸೂರು ತಾಲೂಕು ಅಪ್ಪಟ ವ್ಯವಸಾಯ ಸಂಸ್ಕೃತಿಯ ಪ್ರದೇಶವಾಗಿದೆ. ಇತಿಹಾಸ ಕಾಲದಿಂದಲೂ ಈ ಪ್ರದೇಶ ಕೃಷಿಯೋಗ್ಯ ಭೂಮಿ ಹೊಂದಿದ್ದು, ತೋಟ, ತುಡಿಕೆ, ಹೊಲಗದ್ದೆಗಳನ್ನು ದಾನದತ್ತಿಯಾಗಿ ನೀಡಿದ ಮಾಹಿತಿ ತಾಲೂಕಿನ ಅನೇಕ ಶಾಸನಗಳಲ್ಲಿವೆ. ಮೈಸೂರಿನ ಒಡೆಯರು, ಸಂಸ್ಥಾನದ ದಿವಾನರು ಹಾಗೂ ಕಮಿಷನರುಗಳು ನೀರಾವರಿಗೆ ಪ್ರೋತ್ಸಾಹ ನೀಡಿದ್ದುದರಿಂದ ತಾಲೂಕಿನ ಕೆಲವು ಪ್ರದೇಶಗಳಿಗೆ ನೀರಾವರಿ ಲಭ್ಯವಾಯಿತು. ನೀರಾವರಿಗೆ ಮುನ್ನ ಮಳೆಯಾಶ್ರಯದಲ್ಲಿ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಕಾವೇರಿ ನದಿಗೆ ನಿರ್ಮಿಸಿದ ಅಣೆಕಟ್ಟೆ ಕಾಲುವೆಯೊಂದರ ಶಾಖೆಯೂ ಮೈಸೂರು ತಾಲೂಕಿನ ಕೆಲವು ಭಾಗಗಳಿಗೆ ನೀರೊದಗಿಸಿದ ಪರಿಣಾಮ ವ್ಯವಸಾಯದಲ್ಲಿ ಬದಲಾವಣೆ ಕಂಡಿತು. ಆದರೂ ತಾಲೂಕಿನ ಅರ್ಧಕ್ಕಿಂತ ಹೆಚ್ಚು ಪ್ರದೇಶ ಮಳೆ ಆಧಾರಿತ ವ್ಯವಸಾಯುವನ್ನೇ ಅವಲಂಬಿಸಿದೆ. ಇಂದಿಗೂ ತಾಲೂಕಿನಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಪ್ರಾಚೀನ ಕೃಷಿ ಪದ್ಧತಿಯನ್ನು ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಮಳೆಯಾಶ್ರಯದ ಬೆಳೆ ಬೆಳೆಯುವ ಗ್ರಾಮಗಳು ಯುಗಾದಿ ಹಬ್ಬದಲ್ಲಿ ಹೊನ್ನಾರು ಕಟ್ಟುವುದರ ಮೂಲಕ ಕೃಷಿಕಾರ್ಯಗಳನ್ನು ಪ್ರಾರಂಭಿಸುವುದು ರೂಢಿಯಲ್ಲಿದೆ.

**ಕೃಷಿ ಕಾರ್ಮಿಕರು :** ಮೈಸೂರು ತಾಲೂಕಿನಲ್ಲಿ ೧೯೮೧ರ ಜನಗಣತಿಯಂತೆ ಒಟ್ಟು ೧,೮೯,೫೦೨ ಮುಖ್ಯ ಕೆಲಸಗಾರರಿದ್ದು ಅವರಲ್ಲಿ ೪೧,೧೦೫ ಮಂದಿ ಸಾಗುವಳಿದಾರರು ಮತ್ತು ೧೦,೫೬೮ ಮಂದಿ ಕೃಷಿ ಕಾರ್ಮಿಕರಾಗಿದ್ದರು. ಒಟ್ಟು ಮುಖ್ಯ ಕೆಲಸಗಾರರಲ್ಲಿ ಜಿಲ್ಲೆಯಲ್ಲಿ ಶೇ. ೪೬.೩೭ ಮಂದಿ ಸಾಗುವಳಿದಾರರಾಗಿದ್ದು, ಈ ಪ್ರಮಾಣ ತಾಲೂಕಿನಲ್ಲಿ ಶೇ. ೨೧.೬೯ ಮಾತ್ರ ಆಗಿತ್ತು. ಮೈಸೂರು ನಗರದಿಂದಾಗಿ ಶೇಕಡಾವಾರು ಪ್ರಮಾಣ ಜಿಲ್ಲೆಯದಕ್ಕಿಂತ ಅರ್ಧದಷ್ಟು ಕಡಿಮೆಯಾಗಿತ್ತು. ಜಿಲ್ಲೆಯಲ್ಲಿ ಒಟ್ಟು ಮುಖ್ಯ ಕೆಲಸಗಾರರಲ್ಲಿ ಶೇ. ೨೨.೧೭ರಷ್ಟು ಮಂದಿ ಕೃಷಿ ಕಾರ್ಮಿಕರಾಗಿದ್ದರೆ, ತಾಲೂಕಿನಲ್ಲಿ ಈ ಪ್ರಮಾಣವು ಕೇವಲ ಶೇ. ೫.೫೮ ಆಗಿತ್ತು. ೨೦೦೧ರ ಜನಗಣತಿಯಂತೆ ಮೈಸೂರು ತಾಲೂಕಿನಲ್ಲಿ ೩,೩೯,೯೨೬ ಮುಖ್ಯ ಮತ್ತು ೨೯,೬೪೪ ಅರೆಕಾಲಿಕ ಕೆಲಸಗಾರರು ಹಾಗೂ

೬,೬೮,೯೨೦ ಕೆಲಸಗಾರರಲ್ಲದವರು ವಾಸಿಸುತ್ತಿದ್ದರು. ಒಟ್ಟು ಕೆಲಸಗಾರರಲ್ಲಿ ४೨,೧೫೬ ಮಂದಿ (೩೨,೩೨೬ ಪುರುಷರು + ೯,೮೩೦ ಮಹಿಳೆಯರು) ಕೃಷಿ ಸಾಗುವಳಿದಾರರಾಗಿದ್ದರೆ, ೨೦,४೭४ ಮಂದಿ (೧೦,೦೨೫ ಪುರುಷರು ಮತ್ತು ೧೦,४४೯ ಮಹಿಳೆಯರು) ಕೃಷಿ ಕಾರ್ಮಿಕರಾಗಿದ್ದಾರೆ. ಜಿಲ್ಲೆಯ ಒಟ್ಟು ಮುಖ್ಯ ಕೆಲಸಗಾರರಲ್ಲಿ ಶೇ. ೩೬.೭ರಷ್ಟು ಮಂದಿ ತಾಲೂಕಿನಲ್ಲಿ ವಾಸಿಸುತ್ತಿದ್ದು ತಾಲೂಕುಗಳ ಪೈಕಿ ಮೊದಲ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಕೃಷಿ ಸಾಗುವಳಿದಾರರಲ್ಲಿ ಶೇ. ೧೦.೫ರಷ್ಟು ಮಂದಿ ತಾಲ್ಲೂಕಿನಲ್ಲಿ ವಾಸಿಸುತ್ತಿದ್ದು ತಾಲೂಕುಗಳ ಪೈಕಿ ಆರನೆಯ ಸ್ಥಾನದಲ್ಲಿದೆ. ಅದೇ ರೀತಿ ಜಿಲ್ಲೆಯ ಶೇ. ೮.೨ರಷ್ಟು ಮಂದಿ ಮಾತ್ರ ತಾಲೂಕಿನಲ್ಲಿ ಕೃಷಿ ಕಾರ್ಮಿಕರಾಗಿದ್ದು, ತಾಲೂಕುಗಳ ಪೈಕಿ ಆರನೆಯ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ೧೫,೩೦,೭೬೩ ಕೆಲಸಗಾರರಲ್ಲದವರ ಪೈಕಿ ೬,೬೮,೯೨೦ (ಶೇ. ४೩.೭) ತಾಲೂಕಿನಲ್ಲಿ ವಾಸಿಸುತ್ತಿದ್ದು, ಈ ತಾಲೂಕು ತಾಲೂಕುಗಳ ಪೈಕಿ ಪ್ರಥಮ ಸ್ಥಾನದಲ್ಲಿದೆ. ತಾಲೂಕಿನಲ್ಲಿ ಒಟ್ಟು ಕೃಷಿ ಸಾಗುವಳಿದಾರರಲ್ಲಿ ಶೇ. ೭೬.೭ರಷ್ಟು ಮಂದಿ ಪುರುಷರು ಹಾಗೂ ೨೩.೩ರಷ್ಟು ಮಂದಿ ಮಹಿಳೆಯರಿದ್ದಾರೆ. ಅದೇ ರೀತಿ ಜಿಲ್ಲೆಯ ಒಟ್ಟು ಕೃಷಿ ಕಾರ್ಮಿಕರಲ್ಲಿ ಶೇ. ४೮.೯ ರಷ್ಟು ಮಂದಿ ಪುರುಷರು ಹಾಗೂ ಶೇ. ೫೧.೧ರಷ್ಟು ಮಂದಿ ಮಹಿಳೆಯರಿದ್ದಾರೆ. ತಾಲೂಕಿನ ಮುಖ್ಯ ಕೆಲಸಗಾರರಲ್ಲಿ ಕೇವಲ ಶೇ. ೧೮.४ ರಷ್ಟು ಮಂದಿ ಮಾತ್ರ ಕೃಷಿ ಕಾರ್ಮಿಕರು ಹಾಗೂ ಸಾಗುವಳಿದಾರರಾಗಿದ್ದು ಉಳಿದವರು ಕೃಷಿಯೇತರ ಚಟುವಟಿಕೆಗಳಲ್ಲಿ ನಿರತರಾಗಿರುವುದು ಗಮನಾರ್ಹವಾಗಿದೆ.

**ಭೂಬಳಕೆ:** ಭೂಬಳಕೆಯ ಮೇಲೆ ಭೌಗೋಳಿಕ ಸ್ವರೂಪ, ವಾಯುಗುಣ, ಮಣ್ಣು; ಜನರ ಆರ್ಥಿಕ ಚಟುವಟಿಕೆ, ಮನೋಭಾವನೆ, ನೀರಾವರಿ ಮುಂತಾದ ಅಂಶಗಳು ಪ್ರಭಾವ ಬೀರುತ್ತವೆ. ಭೂಬಳಕೆಯ ರೀತಿ ನೀತಿಗಳು ಜನಸಂಖ್ಯೆ ಹೆಚ್ಚಾದಂತೆ ಮಾನವನ ಆವಶ್ಯಕತೆ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಆದರೆ ಜನಸಂಖ್ಯೆ ಹೆಚ್ಚಾದಂತೆ, ಅವನ ಆಶೋತ್ತರ ಅಧಿಕಗೊಂಡಂತೆ ಭೂಮಿಯನ್ನು ವಿಸ್ತರಿಸಲಾಗುವುದಿಲ್ಲ. ಭೂಪ್ರದೇಶವೂ ಸೀಮಿತವಾಗಿದ್ದು, ಇದನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ತಾಲೂಕಿನ ಭೌಗೋಳಿಕ ವಿಸ್ತೀರ್ಣದ ೨೦೦೩-೦४ರ ಅಂಕಿ ಅಂಶಗಳ ವರದಿಯಂತೆ ಹೀಗಿದೆ. ೮೧೭४೦ ಹೆಕ್ಟೇರ್‌ಗಳಲ್ಲಿ ೩೨೧೬ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ೧೧೨೬೦ ಹೆಕ್ಟೇರ್ ವ್ಯವಸಾಯೇತರ ಉದ್ದೇಶಕ್ಕೆ ಉಪಯೋಗಿಸಲಾಗುತ್ತಿದೆ. ಬಂಜರು ಹಾಗೂ ವ್ಯವಸಾಯ ಮಾಡಲು ಸಾಧ್ಯವಾಗದ ಭೂಮಿ ೬೭೭೦ ಹೆಕ್ಟೇರ್, ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ ೨೨೦೨ ಹೆಕ್ಟೇರ್ ಖಾಯಂ ಗೋಮಾಳ ೧೧४ ಹೆಕ್ಟೇರ್‌ನಲ್ಲಿ ವೃಕ್ಷ ಹಾಗೂ ನಡುತೋಪುಗಳನ್ನು ಬೆಳೆಸಲಾಗುತ್ತಿದೆ.

೨೦೦೭-೦೮ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆ ವರದಿಯಂತೆ ೮೧,೭४೦ ಹೆ. ಭೌಗೋಳಿಕ ವಿಸ್ತೀರ್ಣ ಹೊಂದಿರುವ ಈ ತಾಲೂಕಿನಲ್ಲಿ ಕೇವಲ ೩,೨೧೬ ಹೆ. ಪ್ರದೇಶದಲ್ಲಿ ಮಾತ್ರ ಅರಣ್ಯ ಪ್ರದೇಶವಿದೆ. ಜಿಲ್ಲೆಯ ಶೇ. ೧೨ರಷ್ಟು ಭೌಗೋಳಿಕ ವಿಸ್ತೀರ್ಣ ಹೊಂದಿರುವ ತಾಲೂಕಿನಲ್ಲಿ ಜಿಲ್ಲೆಯ ಅರಣ್ಯ ಪ್ರದೇಶದ

ಶೇ. ೫ರಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಸಾಗುವಳಿಗೆ ಲಭ್ಯವಿಲ್ಲದಿರುವ ಒಟ್ಟು ೧೮,೦೫೦ ಹೆ. ಭೂಮಿಯಲ್ಲಿ ೧೧,೨೮೦ ಹೆ. ಪ್ರದೇಶವನ್ನು ವ್ಯವಸಾಯವನ್ನು ಬಿಟ್ಟು ಇತರ ಉದ್ದೇಶಗಳಿಗೆ ಉಪಯೋಗಿಸಿದ್ದು, ೬೭೭೦ ಹೆ. ಪ್ರದೇಶ ಬಂಜರು ಮತ್ತು ವ್ಯವಸಾಯ ಮಾಡಲು ಸಾಧ್ಯವಿಲ್ಲದ ಭೂಮಿಯಾಗಿದೆ. ಸಾಗುವಳಿ ಮಾಡದಿರುವ ೫,೨೩೫ ಹೆ. ಇತರೆ ಭೂಮಿಯು ಈ ತಾಲೂಕಿನಲ್ಲಿದ್ದು ಇದರಲ್ಲಿ ೨,೨೦೨ ಹೆ. ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ೨,೯೧೯ ಹೆ. ಖಾಯಂ ಗೋಮಾಳ ಹಾಗೂ ೧೧೪ ಹೆ. ಪ್ರದೇಶವು ವೃಕ್ಷ ಮತ್ತು ತೋಪುಗಳಿರುವ ಪ್ರದೇಶವಾಗಿದೆ. ತಾಲೂಕಿನಲ್ಲಿ ೧೫,೯೦೨ ಹೆ. ಬೀಳು ಭೂಮಿಯಿದ್ದು ಇದರಲ್ಲಿ ೫,೧೦೦ ಹೆ. ಚಾಲ್ತಿ ಮತ್ತು ೧೦,೮೦೨ ಹೆ. ಇತರೆ ಬೀಳು ಭೂಮಿ ಪ್ರದೇಶವಾಗಿದೆ. ಬಿತ್ತನೆಯಾಗಿರುವ ನಿವ್ವಳ ಪ್ರದೇಶ ೪೯,೩೩೭ ಹೆ.ಗಳಾಗಿದ್ದು ೩೫,೪೮೦ ಹೆ. ಪ್ರದೇಶವು ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶವಾಗಿದೆ. ಜಿಲ್ಲೆಯ ಒಟ್ಟು ನಿವ್ವಳ ಬಿತ್ತನೆ ಪ್ರದೇಶದ ಶೇ. ೧೧.೫ರಷ್ಟು ಬಿತ್ತನೆ ಪ್ರದೇಶ ತಾಲೂಕಿನಲ್ಲಿದ್ದು, ತಾಲೂಕುಗಳ ಪೈಕಿ ಆರನೆಯ ಸ್ಥಾನದಲ್ಲಿದೆ. ಜಿಲ್ಲೆಯ ಒಟ್ಟು ಬಿತ್ತನೆ ಪ್ರದೇಶದ ಶೇ. ೧೨.೯ರಷ್ಟು ಪ್ರದೇಶ ತಾಲೂಕಿನಲ್ಲಿದ್ದು, ತಾಲೂಕುಗಳ ಪೈಕಿ ನಾಲ್ಕನೆಯ ಸ್ಥಾನದಲ್ಲಿದೆ. ತಾಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.೪೮ರಷ್ಟು ಪ್ರದೇಶ ನಿವ್ವಳ ಬಿತ್ತನೆ ಪ್ರದೇಶವಾಗಿದ್ದು, ಒಟ್ಟು ಬಿತ್ತನೆಯಾದ ಪ್ರದೇಶ ಶೇ. ೯೧.೫ ರಷ್ಟಾಗಿದೆ. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶವು ನಿವ್ವಳ ಬಿತ್ತನೆ ಪ್ರದೇಶದ ಶೇ. ೯೦ರಷ್ಟಿರುವುದು ಗಮನಾರ್ಹವಾಗಿದೆ. ೨೦೦೧ರ ಕೃಷಿ ಗಣತಿಯಂತೆ ಮೈಸೂರು ತಾಲೂಕಿನಲ್ಲಿ ಭೂಹಿಡುವಳಿದಾರರ ಹಂಚಿಕೆ ಹೀಗಿದೆ:

**ಭೂಹಿಡುವಳಿಗಳು ಮತ್ತು ವಿಸ್ತೀರ್ಣ (೨೦೦೧)ರ ಕೃಷಿ ಗಣತಿ:** ಅತಿ ಸಣ್ಣ (ಒಂದು ಹೆಕ್ಟೇರು ಹಿಡುವಳಿಗಿಂತ ಕಡಿಮೆ): ಸಂಖ್ಯೆ–೩೧,೨೮೫, ವಿಸ್ತೀರ್ಣ–೧೪,೪೩೩; ಸಣ್ಣ (೧ ರಿಂದ ೨ ಹೆಕ್ಟೇರು): ಸಂಖ್ಯೆ–೧೧,೮೯೧ ವಿಸ್ತೀರ್ಣ–೧೬,೬೪೪; ಅರೆ ಮಧ್ಯಮ (೨ ರಿಂದ ೪ ಹೆಕ್ಟೇರು): ಸಂಖ್ಯೆ–೪,೪೮೬; ವಿಸ್ತೀರ್ಣ–೧೧,೯೦೮; ಮಧ್ಯಮ (೪ ರಿಂದ ೧೦ ಹೆಕ್ಟೇರು): ಸಂಖ್ಯೆ–೧,೧೧೦: ವಿಸ್ತೀರ್ಣ–೫,೯೯೧; ದೊಡ್ಡ (೧೦ ಹೆಕ್ಟೇರಿಗೂ ಹೆಚ್ಚು): ಸಂಖ್ಯೆ–೮೮, ವಿಸ್ತೀರ್ಣ–೧,೨೫೭; ಒಟ್ಟು: ಸಂಖ್ಯೆ–೪೮,೮೬೦; ವಿಸ್ತೀರ್ಣ–೫೦,೨೩೩. ಒಟ್ಟಾರೆ ಮೈಸೂರು ತಾಲೂಕಿನಲ್ಲಿ ೪೮,೮೬೦ ಭೂಹಿಡುವಳಿದಾರರಿದ್ದು, ೫೦,೨೩೩ ಹೆಕ್ಟೇರ್ ಭೂ ಹಿಡುವಳಿ ಹೊಂದಿರುವರು. ನಿವ್ವಳ ಬಿತ್ತನೆಯಾಗಿರುವ ಪ್ರದೇಶ ೩೫,೯೦೩ ಹೆಕ್ಟೇರ್ ಪ್ರದೇಶ, ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶ ೨೦,೪೯೧ ಹೆಕ್ಟೇರ್. ಚಾಲ್ತಿ ಬೀಳು ಭೂಮಿ ೪,೩೪೮ ಹೆಕ್ಟೇರ್,ಇತರೆ ೧೫,೦೦೮ ಹೆಕ್ಟೇರ್ ಪ್ರದೇಶ.

೨೦೦೫–೦೬ರ ಕೃಷಿ ಗಣತಿಯಂತೆ ತಾಲೂಕಿನಲ್ಲಿ ೨೪,೮೧೧ ಅತಿ ಸಣ್ಣ ಹಿಡುವಳಿದಾರರು, ೭,೪೦೭ ಸಣ್ಣ, ೩,೨೮೫ ಅರೆ ಮಧ್ಯಮ ೯೮೭ ಮಧ್ಯಮ, ೧೦೩ ದೊಡ್ಡ ಹಾಗೂ ಒಟ್ಟು ೩೬,೫೯೭ ಹಿಡುವಳಿದಾರರಿದ್ದಾರೆ. ಅವರು ಹೊಂದಿರುವ

ಹಿಡುವಳಿ ವಿಸ್ತೀರ್ಣ ಕ್ರಮವಾಗಿ ೧೦,೦೩೮ ಹೆ. ೧೦,೦೨೧ ಹೆ., ೮,೪೬೩ ಹೆ., ೫,೩೨೯ ಹೆ., ೧,೭೬೪ ಹೆ. ಹಾಗೂ ಒಟ್ಟು ೩೫,೬೧೫ ಹೆ. ಗಳಾಗಿದೆ. ಸರಾಸರಿ ಹಿಡುವಳಿ ವಿಸ್ತೀರ್ಣ ಕೇವಲ ೦.೯೭ ಹೆ.ಗಳಾಗಿದ್ದು ಜಿಲ್ಲೆಯ ಸರಾಸರಿ ವಿಸ್ತೀರ್ಣವು ಸಹ ೦.೯೭ ಹೆ. ಆಗಿದೆ. ಜಿಲ್ಲೆಯ ಅತಿ ಸಣ್ಣ ಹಿಡುವಳಿದಾರರಲ್ಲಿ ಶೇ. ೧೦.೧೪ರಷ್ಟು, ಸಣ್ಣ ಹಿಡುವಳಿದಾರರಲ್ಲಿ ಶೇ. ೮.೭೧ ರಷ್ಟು, ಅರೆ ಮಧ್ಯಮ ಹಿಡುವಳಿದಾರರಲ್ಲಿ ಶೇ. ೯.೯೯ರಷ್ಟು, ಮಧ್ಯಮ ಹಿಡುವಳಿದಾರರಲ್ಲಿ ಶೇ. ೧೨.೩೨ರಷ್ಟು, ದೊಡ್ಡ ಹಿಡುವಳಿದಾರರಲ್ಲಿ ಶೇ. ೧೯.೨ರಷ್ಟು ಹಾಗೂ ಒಟ್ಟು ಹಿಡುವಳಿದಾರರಲ್ಲಿ ಶೇ. ೯.೮೬ರಷ್ಟು ಹಿಡುವಳಿದಾರರು ತಾಲೂಕಿನಲ್ಲಿದ್ದಾರೆ. ತಾಲೂಕಿನಲ್ಲಿರುವ ಒಟ್ಟು ಹಿಡುವಳಿದಾರರಲ್ಲಿ ಶೇ. ೬೭.೮ರಷ್ಟು ಸಣ್ಣ ಹಿಡುವಳಿದಾರರಾಗಿರುವುದು ಗಮನಾರ್ಹವಾಗಿದೆ. ಆದರೆ ಒಟ್ಟು ಹಿಡುವಳಿಗಳ ವಿಸ್ತೀರ್ಣದ ಶೇ. ೨೮.೧೮ರಷ್ಟು ವಿಸ್ತೀರ್ಣವು ಮಾತ್ರ ಸಣ್ಣ ಹಿಡುವಳಿದಾರರದ್ದಾಗಿದೆ. ಕೇವಲ ೭,೪೦೭ ಸಣ್ಣ ಹಿಡುವಳಿದಾರರು ಸಹ ಒಟ್ಟು ಹಿಡುವಳಿಗಳ ವಿಸ್ತೀರ್ಣದ ಶೇ. ೨೦.೮ರಷ್ಟು ಹೊಂದಿರುತ್ತಾರೆ. ಜಿಲ್ಲೆಯಲ್ಲಿಯೂ ಒಟ್ಟು ಹಿಡುವಳಿದಾರರಲ್ಲಿ ಶೇ. ೬೫.೯ ಅತಿ ಸಣ್ಣ ಹಾಗೂ ಶೇ. ೨೮.೧೩ ಸಣ್ಣ ಹಿಡುವಳಿದಾರರಾಗಿದ್ದಾರೆ.

**ಬೆಳೆ ಪದ್ಧತಿ:** ಬೆಳೆಗಳ ಬಿತ್ತನೆ ಹಾಗೂ ಕಟಾವಿನ ಅವಧಿಯು ಒಂದೇ ರೀತಿಯಾಗಿರದೇ ಋತುಕಾಲೀನವಾಗಿರುತ್ತದೆ. ೧) **ಮುಂಗಾರು ಬೆಳೆ:** ಇದನ್ನು ಖಾರಿಫ್ ಎಂದೂ ಕರೆಯುವರು. ಜೂನ್‌ನಿಂದ ಪ್ರಾರಂಭವಾಗಿ ಸೆಪ್ಟೆಂಬರ್‌ನಲ್ಲಿ ಅಂತ್ಯಗೊಳ್ಳುತ್ತದೆ. **೨) ಹಿಂಗಾರು ಬೆಳೆ:** ಇದನ್ನು ರಬಿ ಎಂದೂ ಕರೆಯುವರು. ಇದು ಅಕ್ಟೋಬರ್ ಮಧ್ಯದಲ್ಲಿ ಪ್ರಾರಂಭವಾಗಿ ಜನವರಿಯಲ್ಲಿ ಅಂತ್ಯಗೊಳ್ಳುತ್ತದೆ. ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲಿ ಬೇಸಿಗೆ ಬೆಳೆಗಳನ್ನು ಬೆಳೆಯಲಾಗುತ್ತದೆ.

| **ಬೆಳೆಗಳು** | **೧೯೯೯–೨೦೦೦ ಹೆಕ್ಟೇರ್** | **ಶೇಕಡ** | **೨೦೦೪–೦೫ ಹೆಕ್ಟೇರ್** | **ಶೇಕಡ** |
|---|---|---|---|---|
| ಆಹಾರಬೆಳೆ | ೪೦,೮೯೬ | ೬೪.೪೭ | ೪೧,೮೨೯ | ೭೯.೭೩ |
| ಎಣ್ಣೆಕಾಳು | ೬೩,೧೩ | ೯.೯೫ | ೪,೪೨೯ | ೮.೪೫ |
| ಕಬ್ಬು | ೧,೪೬೭ | ೨.೩೧ | ೨,೫೨೯ | ೪.೯೩ |
| ಹತ್ತಿ | ೮,೭೮೩ | ೧೩.೮೪ | ೪೫೦ | ೦.೦೧ |
| ಹಣ್ಣುತರಕಾರಿ | ೫,೯೭೨ | ೯.೪೧ | ೩,೧೫೪ | ೬.೦೧ |
| ಒಟ್ಟು | **೬೩,೪೩೧** | **೯೯.೯೮** | **೫೨,೪೭೩** | **೯೯.೯೭** |

ಬೆಳೆಗಳು ಪ್ರದೇಶದಿಂದ ಪ್ರದೇಶಕ್ಕೆ ಕಾಲ, ಮಳೆಗಳೊಂದಿಗೆ, ಬದಲಾವಣೆ ಹೊಂದುತ್ತಿರುತ್ತವೆ. ಮೈಸೂರು ತಾಲೂಕಿನ ಬೆಳೆಯುವ ಪ್ರಮುಖ ಬೆಳೆಗಳು ಹೀಗಿವೆ:

ಏಕದಳಧಾನ್ಯ: ಭತ್ತ, ರಾಗಿ, ಜೋಳ, ಮುಸುಕಿನ ಜೋಳ ಇತ್ಯಾದಿ. ದ್ವಿದಳಧಾನ್ಯ: ಅಲಸಂದೆ, ತೊಗರಿ, ಅವರೆ, ಹೆಸರು, ಹುರುಳಿ, ಉದ್ದು ಮುಂತಾದವು. ಎಣ್ಣೆಕಾಳು: ಸೂರ್ಯಕಾಂತಿ, ನೆಲಗಡಲೆ, ಹರಳು, ಹುಚ್ಚೆಳ್ಳು, ಎಳ್ಳು. ವಾಣಿಜ್ಯ ಬೆಳೆ: ಕಬ್ಬು, ಹತ್ತಿ, ತಂಬಾಕು ಮುಂತಾದವು.

**ಬೆಳೆಗಳು :** ಜಿಲ್ಲೆಯಲ್ಲಿ ೨೦೦೭-೦೮ನೇ ಸಾಲಿನಲ್ಲಿ ೨,೪೨,೦೬೯ ಹೆ. ಪ್ರದೇಶದಲ್ಲಿ ಒಟ್ಟು ಏಕದಳ ಮತ್ತು ಉಪತೃಣ ಬೆಳೆಗಳನ್ನು ಬೆಳೆಯಲಾಗಿದ್ದು ತಾಲೂಕಿನಲ್ಲಿ ೩೧,೨೯೬ ಹೆ. ಪ್ರದೇಶದಲ್ಲಿ ಮಾತ್ರ ಬೆಳೆಯಲಾಗಿದ್ದು, ಇದು ಶೇ. ೧೨.೯೩ರಷ್ಟಾಗುತ್ತದೆ. ತಾಲೂಕಿನಲ್ಲಿ ೧೧,೨೨೨ ಹೆ. ಪ್ರದೇಶದಲ್ಲಿ ಭತ್ತವನ್ನು, ೧೫,೪೫೪ ಹೆ. ಪ್ರದೇಶದಲ್ಲಿ ರಾಗಿಯನ್ನು ಮತ್ತು ೪,೨೨೯ ಹೆ. ಪ್ರದೇಶದಲ್ಲಿ ಮುಸುಕಿನ ಜೋಳವನ್ನು ಬೆಳೆಯಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೧,೧೯,೯೦೭ ಹೆ. ಪ್ರದೇಶದಲ್ಲಿ ದ್ವಿದಳ ಧಾನ್ಯಗಳ ಬೆಳೆ ಬೆಳೆಯಲಾಗಿದ್ದು, ತಾಲೂಕಿನಲ್ಲಿ ಈ ಪ್ರಮಾಣ ೧೯,೮೫೭ ಹೆ.ಗಳಾಗಿದ್ದು ಇದು ಶೇ. ೧೬.೫೬ ರಷ್ಟಾಗುತ್ತದೆ. ದ್ವಿದಳ ಧಾನ್ಯಗಳಲ್ಲಿ ತಾಲೂಕಿನಲ್ಲಿ ೨೮೩ ಹೆ. ಕಡಲೆಯನ್ನು, ೧,೨೮೪ ಹೆ. ತೊಗರಿಯನ್ನು ಮತ್ತು ೧೮,೨೯೦ ಹೆ. ಪ್ರದೇಶಗಳಲ್ಲಿ ಇತರ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯಲಾಗಿದೆ. ತಾಲೂಕಿನಲ್ಲಿ ಒಟ್ಟು ೫೧,೧೫೩ ಹೆ. ಪ್ರದೇಶದಲ್ಲಿ ಒಟ್ಟು ಆಹಾರ ಧಾನ್ಯ ಬೆಳೆಗಳನ್ನು ಬೆಳೆದಿದ್ದು ಇದು ಜಿಲ್ಲೆಯ ಶೇ. ೧೪ರಷ್ಟಾಗುತ್ತದೆ. ಒಟ್ಟು ೧೦,೪೭೩ ಹೆ. ಪ್ರದೇಶದಲ್ಲಿ ಎಣ್ಣೆಕಾಳು ಬೆಳೆಗಳನ್ನು ಬೆಳೆದಿದ್ದು, ತಾಲೂಕುಗಳ ಪೈಕಿ ಪ್ರಥಮ ಸ್ಥಾನ ಹೊಂದಿದೆ. ೫,೭೦೨ ಹೆ. ಪ್ರದೇಶದಲ್ಲಿ ನೆಲಗಡಲೆಯುನ್ನು, ೩೪ ಹೆ. ಪ್ರದೇಶದಲ್ಲಿ ಸೂರ್ಯಕಾಂತಿಯನ್ನು ಮತ್ತು ಉಳಿದ ೪,೭೩೭ ಹೆ. ಪ್ರದೇಶದಲ್ಲಿ ಇತರೆ ಎಣ್ಣೆಕಾಳು ಬೆಳೆಗಳನ್ನು ಬೆಳೆಯಲಾಗಿದೆ. ೧,೯೬೯ ಹೆ. ಪ್ರದೇಶದಲ್ಲಿ ಕಬ್ಬಿನ ಬೆಳೆ ಬೆಳೆದಿದ್ದು ಇದು ಜಿಲ್ಲೆಯ ಶೇ. ೧೫.೨ರಷ್ಟಾಗಿದೆ.

ಒಟ್ಟು ೭,೯೬೬ ಹೆ. ಪ್ರದೇಶದಲ್ಲಿ ಆಹಾರೇತರ ಬೆಳೆಗಳ ಪ್ರದೇಶವಿದ್ದು, ಅದರಲ್ಲಿ ೯೫ ಹೆ. ಪ್ರದೇಶದಲ್ಲಿ ತಂಬಾಕನ್ನು, ೨,೯೦೦ ಹೆ. ಪ್ರದೇಶದಲ್ಲಿ ಹತ್ತಿಯನ್ನು ಹಾಗೂ ಉಳಿದ ೫,೦೫೧ ಹೆ. ಪ್ರದೇಶದಲ್ಲಿ ಇತರೆ ಆಹಾರೇತರ ಬೆಳೆಗಳನ್ನು ಬೆಳೆಯಲಾಗಿದೆ. ತಾಲೂಕಿನಲ್ಲಿ ಒಟ್ಟು ೭೪,೮೧೭ ಪ್ರದೇಶದಲ್ಲಿ ಎಲ್ಲಾ ಬೆಳೆಗಳನ್ನು ಬೆಳೆದಿದ್ದು, ಇದು ಒಟ್ಟು ಭೌಗೋಳಿಕ ಪ್ರದೇಶದ ಶೇ. ೯೧.೫ ರಷ್ಟಾಗಿದೆ. ಆದರೆ ನಿವ್ವಳ ಬಿತ್ತನೆ ಪ್ರದೇಶವು ಭೌಗೋಳಿಕ ವಿಸ್ತೀರ್ಣದ ಶೇ. ೪೮.೧೨ ರಷ್ಟು ಮಾತ್ರವಿದ್ದು, ಉಳಿದದ್ದು ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡಿದ ಪ್ರದೇಶವಾಗಿದೆ.

ತಾಲೂಕಿನಾದ್ಯಂತ ರಾಗಿ, ಬತ್ತ, ಜೋಳ, ಹತ್ತಿ, ಹರಳು, ಎಳ್ಳು, ಮೆಣಸಿನಕಾಯಿ, ಬದನೆ, ಬೆಂಡೆ, ಟೊಮಾಟೋ, ಸೀಬೆ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ರೈತರು ಬಿತ್ತನೆಗೆ ಬೇಕಾದ ಬೀಜವನ್ನು ಹಿಂದೆ ತಾವೇ ಬೆಳೆದ ಬೆಳೆಯಿಂದ ಶೇಖರಿಸಿಟ್ಟುಕೊಳ್ಳುತ್ತಿದ್ದರು. ಸದೃಢವಾಗಿ ಬೆಳೆದಿರುವ ಧಾನ್ಯ, ತೆನೆಗಳನ್ನು ಜಮೀನಿನಲ್ಲಿಯೇ ಪ್ರತ್ಯೇಕಿಸಿ, ಬಡಿದು ಗಟ್ಟಿಕಾಳುಗಳನ್ನು ಬಿತ್ತನೆಗಾಗಿ ಸಂಗ್ರಹಿಸುತ್ತಿದ್ದರು. ಬಿತ್ತನೆ ಬತ್ತ,

ತೊಗರಿ, ಅವರೆ, ಅಲಸಂದೆ, ಹುರುಳಿ ಮುಂತಾದವುಗಳನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ಮೆಣಸಿನಕಾಯಿ, ಚೌಳು ಬೆರೆಸಿ ಚೀಲಗಳಲ್ಲಿ ತುಂಬಿಡುವರು. ವಿವಿಧ ತರಕಾರಿ ಗಿಡಗಳಲ್ಲಿ ತಮಗೆ ಬೇಕಾದ ಬಿತ್ತನೆ ಬೀಜ ಪಡೆಯಲು ಗಿಡಗಳಲ್ಲೆ ಚೆನ್ನಾಗಿ ಬಲಿತು ಹಣ್ಣಾದ ದೊಡ್ಡ ಗಾತ್ರದ ಕಾಯಿಯ ಬೀಜವನ್ನು ಬಿಡಿಸಿ, ಒಣಗಿಸಿ, ಬೂದಿ ಮಿಶ್ರಣ ಮಾಡಿ ಬಟ್ಟೆಯಲ್ಲಿ ಕಟ್ಟಿಡುವರು. ಯಾವುದೇ ರಾಸಾಯನಿಕ ವಸ್ತುವನ್ನು ಬಳಸದೇ ಸ್ವಾಭಾವಿಕ ವಿಧಾನದಿಂದ ಬಿತ್ತನೆ ಬೀಜವನ್ನು ಸಂರಕ್ಷಿಸಿಡುವರು. ಇತ್ತೀಚೆಗೆ ಆಗ್ರೋ ಕೇಂದ್ರಗಳಲ್ಲಿ ಸುಧಾರಿತ ಬಿತ್ತನೆ ಬೀಜಗಳ ಬಳಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ.

ಇದು ವ್ಯವಸಾಯ ಪ್ರಧಾನವಾದ ತಾಲೂಕಾಗಿದ್ದು, ಇಲ್ಲಿನ ಮಣ್ಣು ಮರಳು ಮಿಶ್ರಿತ ಕೆಂಪು ಜೇಡಿಮಣ್ಣು ಆಗಿದೆ. ತಾಲೂಕಿನ ಉತ್ತರ ಭಾಗದಲ್ಲಿ ಹರಿದಿರುವ ವಿರಿಜಾನಾಲೆ ವ್ಯವಸಾಯಕ್ಕೆ ನೀರಾವರಿ ಒದಗಿಸಿದೆ. ತಾಲೂಕಿನಲ್ಲಿ ಬತ್ತ, ರಾಗಿ, ಜೋಳ, ತೊಗರಿ, ಹುರುಳಿ, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ ಹಾಗೂ ಹತ್ತಿ ಮುಂಗಾರಿನ ಪ್ರಮುಖ ಬೆಳೆಗಳು. ಜೋಳ, ರಾಗಿ, ಸೂರ್ಯಕಾಂತಿ, ಹುರುಳಿ ಮತ್ತು ಅಲಸಂದೆ ಮುಖ್ಯ ಹಿಂಗಾರಿನ ಬೆಳೆಗಳಾಗಿರುತ್ತವೆ. ಬತ್ತ, ರಾಗಿ, ನೆಲಗಡಲೆ, ದ್ವಿದಳ ಧಾನ್ಯಗಳು ಮುಖ್ಯ ಬೇಸಿಗೆ ಬೆಳೆಗಳಾಗಿರುತ್ತವೆ. ಕಬ್ಬು ಪ್ರಮುಖ ವಾರ್ಷಿಕ ವಾಣಿಜ್ಯ ಬೆಳೆಯಾಗಿದೆ.

**ರಾಗಿ :** ದಕ್ಷಿಣಕರ್ನಾಟಕದ ಮುಖ್ಯ ಬೆಳೆಯಾದ ರಾಗಿ, ಹವಾಮಾನದ ಏರುಪೇರುಗಳಿಗೆ ಹೊಂದಿಕೊಂಡು ಒಣಬೇಸಾಯ ಕ್ರಮದಲ್ಲೂ ಉತ್ತಮ ಫಸಲನ್ನು ನೀಡುತ್ತದೆ. ಸರ್ವ ಋತುಗಳಲ್ಲೂ ಇದನ್ನು ಬೆಳೆಯಬಹುದು. ಮಳೆ ಅಭಾವದಿಂದಾಗಿ ಒಣಗಿದಂತಿದ್ದರೂ ಸ್ವಲ್ಪ ಮಳೆ ಬಿದ್ದೊಡನೆ ಪೂರ್ಣವಾಗಿ ಚೇತರಿಸಿಕೊಂಡು ಉತ್ತಮ ಫಲ ಕೊಡಬಲ್ಲದು. ಅಧಿಕ ಪೌಷ್ಟಿಕಾಂಶಗಳನ್ನು ಒಳಗೊಂಡಿರುವುದರಿಂದ ಕಷ್ಟ ಜೀವಿಗಳಿಗೆ ಚೈತನ್ಯದಾಯಕ. ರಾಗಿ ಬೆಳೆಗೆ ರೋಗ ರುಜಿನಾದಿಗಳು ಬರುವುದು ಕಡಿಮೆ. ಮೈಸೂರು ತಾಲೂಕು ಸಹ ಮಳೆಯಾಶ್ರಿತವಾದ್ದರಿಂದ ಇಲ್ಲಿನ ಬಹುತೇಕ ಬೆಳೆಗಳನ್ನು ಮಳೆಯಾಶ್ರಯದಲ್ಲಿಯೇ ಬೆಳೆಯಬೇಕು. ತಾಲೂಕಿನಲ್ಲಿ ರಾಗಿ ಬೆಳೆಯನ್ನು ಕೂರಿಗೆ ಬಿತ್ತನೆ, ಬಿತ್ತುವುದು, ನಾಟಿ ಮಾಡುವುದೇ ಹೆಚ್ಚಾಗಿ ಪ್ರಚಲಿತದಲ್ಲಿದೆ. ತಾಲೂಕಿನಲ್ಲಿ ೨೦೦೪-೦೫ ಸಾಲಿನಲ್ಲಿ ೧೪,೦೬೮ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು, ಇದು ೨೦೦೭-೦೮ರಲ್ಲಿ ೧೫,೪೫೪ ಹೆಕ್ಟೇರ್‌ಗೆ ಹೆಚ್ಚಳಗೊಂಡಿದೆ. ಇದರ ಜೊತೆಗೆ ಅಲಸಂದೆ, ಅವರೆ, ತೊಗರಿ, ಉದ್ದು, ಹುಚ್ಚೆಳ್ಳು, ಹರಳು ಮೊದಲಾದ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುವುದು.

**ಬತ್ತ :** ದಕ್ಷಿಣ ಕರ್ನಾಟಕದ ಪ್ರಮುಖ ಆಹಾರ ಬೆಳೆಯಾದ ಬತ್ತವನ್ನು ಈ ಪ್ರದೇಶದಲ್ಲೂ ಮಳೆ, ನಾಲೆ, ಕೆರೆ ಹಾಗೂ ಬಾವಿ ನೀರಾವರಿ ಬೆಳೆಯಾಗಿ ಬೆಳೆಯಲಾಗುತ್ತಿದೆ. ಬತ್ತದ ಬಿತ್ತನೆಯಲ್ಲೂ ಬಿತ್ತುವ ಹಾಗೂ ನಾಟಿ ಮಾಡುವ ವಿಧಾನಗಳೂ ಚಾಲ್ತಿಯಲ್ಲಿವೆ. ನೀರಾವರಿ ಆಶ್ರಯದಲ್ಲಿ ಸುಧಾರಿತ ತಳಿಗಳನ್ನು ಬೆಳೆಸಿದರೆ, ಮಳೆಯಾಶ್ರಯದಲ್ಲಿ ಸ್ಥಳೀಯ ಬರಬತ್ತ ಎಂಬ ತಳಿಗಳನ್ನು ಬೆಳೆಸಲಾಗುತ್ತದೆ. ಮಳೆ ಹಾಗೂ ಕಾಲುವೆ

ನೀರಿನ ಲಭ್ಯತೆಯನ್ನನುಸರಿಸಿ ಭತ್ತದ ಸಸಿಗಳನ್ನು ಮಡಿಗಳಲ್ಲಿ ಬೆಳೆಸಿ ನಾಟಿ ಮಾಡುವರು. ಮೈಸೂರು ತಾಲೂಕಿನಲ್ಲಿ ೨೦೦೪-೦೫ರಲ್ಲಿ ೫,೦೨೯ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿತ್ತು. ತಾಲೂಕಿನಲ್ಲಿ ರಾಗಿ, ಬತ್ತಗಳ ಜೊತೆಗೆ ಇತರ ಆಹಾರ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವರು. ಜೋಳವೂ ಗ್ರಾಮೀಣ ಪ್ರದೇಶದ ಕೆಲವರ ಆಹಾರ ಬೆಳೆಯಾಗಿದ್ದು, ೨೦೦೪-೦೫ನೇ ಸಾಲಿನಲ್ಲಿ ೪,೪೬೬ ಹೆಕ್ಟೇರ್ ಪ್ರದೇಶದಲ್ಲೂ ಮುಸುಕಿನ ಜೋಳ ೩೦ ಹೆಕ್ಟೇರ್ ಪ್ರದೇಶದಲ್ಲೂ, ದ್ವಿದಳ ಧಾನ್ಯಗಳಾದ ಕಡಲೆಯನ್ನು ೧೪ ಹೆಕ್ಟೇರ್ ಪ್ರದೇಶದಲ್ಲೂ, ತೊಗರಿ ೮೫೮ ಹೆಕ್ಟೇರ್ ಪ್ರದೇಶದಲ್ಲೂ, ಇತರೆ ದ್ವಿದಳ ಧಾನ್ಯಗಳನ್ನು ೧೭,೩೭೪ ಹೆಕ್ಟೇರ್ ಪ್ರದೇಶದಲ್ಲೂ, (ಒಟ್ಟು ೧೮,೨೪೬ ಹೆಕ್ಟೇರ್) ಬೆಳೆಯಲಾಗಿತ್ತು. ಎಣ್ಣೆಕಾಳುಬೆಳೆಗಳಾದ ನೆಲಗಡಲೆಯನ್ನು ೧,೪೫೮ ಹೆಕ್ಟೇರ್ ಪ್ರದೇಶದಲ್ಲೂ, ಸೂರ್ಯಕಾಂತಿ ನಾಲ್ಕು ಹೆಕ್ಟೇರ್, ಇತರೆ ಎಣ್ಣೆಕಾಳುಗಳಾದ ಹರಳು, ಹುಚ್ಚೆಳ್ಳು ಮುಂತಾದವನ್ನು ೪,೪೩೯ ಹೆಕ್ಟೇರ್ ಪ್ರದೇಶದಲ್ಲೂ ಬೆಳೆಯಲಾಗಿತ್ತು. ವಿವಿಧ ರೀತಿಯ ಹಣ್ಣುಗಳನ್ನು ೧,೪೫೦ ಹೆಕ್ಟೇರ್‌ನಲ್ಲೂ ಹಲವು ಬಗೆಯ ತರಕಾರಿಗಳನ್ನು ೧,೭೦೪ ಹೆಕ್ಟೇರ್ ಪ್ರದೇಶದಲ್ಲೂ ಬೆಳೆಯಲಾಗಿತ್ತು.

ವಾಣಿಜ್ಯ ಬೆಳೆಗಳಾದ ಕಬ್ಬನ್ನು ೨೩೯೧ ಹೆಕ್ಟೇರ್ ಪ್ರದೇಶದಲ್ಲೂ ಹಾಗೂ ಹತ್ತಿಯನ್ನು ೪೫೦ ಹೆಕ್ಟೇರ್ ಪ್ರದೇಶದಲ್ಲೂ ಬೆಳೆಯಲಾಗುತ್ತಿದೆ. ರೇಷ್ಮೆ ಕೃಷಿಯು ತಾಲೂಕಿನ ಪ್ರಮುಖ ವಾಣಿಜ್ಯ ಕಸುಬಾಗಿದೆ. ತಾಲೂಕಿನಲ್ಲಿ ಹಿಪ್ಪು ನೇರಳೆ ಬೆಳೆಯನ್ನು ೨೮೧.೯೭ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ೧೯೫.೨೫೨ ಟನ್ ರೇಷ್ಮೆಗೂಡು ಉತ್ಪಾದನೆ ಮಾಡಿ ೨೧೪.೭೭೭ ಲಕ್ಷ ರೂ.ಗಳ ಮೌಲ್ಯದ ವಹಿವಾಟನ್ನು ನಡೆಸಲಾಗಿದೆ (೨೦೦೪-೦೫). ತಾಲೂಕಿನಲ್ಲಿ ಚದುರಿದಂತೆ ತೆಂಗು, ಬಾಳೆ, ಅಡಿಕೆ, ಮಾವು, ಸೀಬೆ ಹಾಗೂ ಕಾಫಿ ತೋಟಗಳು ಕಂಡುಬರುತ್ತವೆ. ದನ, ಎತ್ತುಗಳ ಸಹಾಯದಿಂದ ನೇಗಿಲಿನಲ್ಲಿ ಉಳುಮೆ ಮಾಡುವುದು ಸಾಮಾನ್ಯವಾದರೂ ಅಲ್ಲಲ್ಲಿ ರೈತರು ಟ್ರಾಕ್ಟರ್, ಟ್ರ್ಯಾಲಿ ಮುಂತಾದ ಆಧುನಿಕ ಕೃಷಿ ಉಪಕರಣಗಳನ್ನು ಬಳಸಿ ವೈಜ್ಞಾನಿಕ ವ್ಯವಸಾಯಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಜೀವನಾಧಾರ ಕಸುಬಾಗಿದ್ದ ಬೇಸಾಯ ಇಂದು ವಾಣಿಜ್ಯ ಕಸುಬಾಗಿ ಬದಲಾಗುತ್ತಿದ್ದು, ರೈತರ ಪ್ರಮುಖ ಆರ್ಥಿಕ ಮೂಲವೇ ವ್ಯವಸಾಯವಾಗಿದೆ.

ಈ ತಾಲೂಕಿನಲ್ಲಿ ವ್ಯವಸಾಯಕ್ಕೆ ೨೦೦೮-೦೯ರಲ್ಲಿ ಸಾರಜನಕ ೧೩,೩೭೩ ಟನ್, ರಂಜಕ ೧೦,೮೯೬ ಟನ್, ಪೊಟ್ಯಾಷ್ ೮,೪೩೯ ಟನ್ (ಒಟ್ಟು ೩೨,೭೨೮ ಟನ್)ಗಳಷ್ಟು ರಾಸಾಯನಿಕ ಗೊಬ್ಬರವನ್ನು ಬಳಸಲಾಗಿದೆ.

ಮೈಸೂರು ಪ್ರದೇಶವನ್ನಾಳಿದ ರಾಜಮಹಾರಾಜರು ಕೃಷಿಗೆ ಪ್ರೋತ್ಸಾಹ ನೀಡಿರುವುದು ಸಾಹಿತ್ಯ, ಶಾಸನಾಧಾರಗಳಿಂದ ತಿಳಿಯುತ್ತದೆ. ಕೃಷಿ ಪ್ರಗತಿಗಾಗಿಯೇ ಮೈಸೂರು ಸಂಸ್ಥಾನದಲ್ಲಿ ಆಧುನಿಕ ಯೋಜನೆಗಳನ್ನು ಕೈಗೊಳ್ಳಲಾಯಿತು. ದಿವಾನ್ ಕೆ. ಶೇಷಾದ್ರಿ ಐಯ್ಯರ್ (೧೮೮೩-೧೯೦೧) ಆಡಳಿತಾವಧಿಯಲ್ಲಿ ಮೈಸೂರಿನಲ್ಲಿ

ಕೃಷಿ ಇಲಾಖೆಯನ್ನು (೧೮೮೮) ಸ್ಥಾಪಿಸಿದರಲ್ಲದೆ ಕೃಷಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಬಯಸಿದ ವಿದ್ಯಾರ್ಥಿಗಳನ್ನು ಮದ್ರಾಸಿಗೆ ಕಳುಹಿಸಿದರು. ಪ್ರಥಮ ಬಾರಿಗೆ ೧೮೮೮ರಲ್ಲಿ ಕೃಷಿ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನವನ್ನು ಮೈಸೂರಿನಲ್ಲಿ ಏರ್ಪಡಿಸಿದರು. ರೈತರಿಗೆ ಸಾಲ ಕೊಡಲು ೧೮೯೪ರಲ್ಲಿ ಕೃಷಿ ಬ್ಯಾಂಕನ್ನು ಮೈಸೂರಿನಲ್ಲಿ ತೆರೆದರು. ದಿವಾನ್ ಎಂ. ವಿಶ್ವೇಶ್ವರಯ್ಯ (೧೯೧೨-೧೯೧೮)ನವರ ಕಾಲದಲ್ಲೂ ಮೈಸೂರು ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದಂತೆಯೇ ಕೃಷಿಯಲ್ಲೂ ಗಮನಾರ್ಹ ಸಾಧನೆ ಸಾಧಿಸಿತು. ಇವರು ಕೃಷಿ ವಸ್ತು ಪ್ರದರ್ಶನವನ್ನು ಏರ್ಪಡಿಸಿ ರೈತರಿಗೆ ಸುಧಾರಿತ ಬೀಜ, ರಸಗೊಬ್ಬರ ಹಾಗೂ ತಂತ್ರಜ್ಞಾನಗಳ ಬಳಕೆಯ ತಿಳುವಳಿಕೆಯನ್ನು ನೀಡಿದರು. ಅವರು ೧೯೧೦ರಲ್ಲಿ ಮೈಸೂರು ತಾಲೂಕಿನ ನಾಗೇನಹಳ್ಳಿಯಲ್ಲಿ ಕಬ್ಬು ಹಾಗೂ ಬತ್ತದ ಸಂಶೋಧನಾ ಕೇಂದ್ರವನ್ನು ತೆರೆದರು.

**ಕೃಷಿ ಸಂಶೋಧನಾ ಕೇಂದ್ರ – ನಾಗೇನಹಳ್ಳಿ :** ಮೈಸೂರು ಜಿಲ್ಲೆಯ ಪ್ರದೇಶದಲ್ಲಿ ಬೆಳೆಯುತ್ತಿದ್ದ ಬತ್ತ, ಕಬ್ಬು, ರಾಗಿ ಮತ್ತು ನೆಲಗಡಲೆ ಬೆಳೆಗಳ ಬಗ್ಗೆ ಸಂಶೋಧನೆ ಕೈಗೊಳ್ಳಲು ಹಾಗೂ ರೈತರಿಗಾಗಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲು ೧೯೧೦ರಲ್ಲಿ ನಾಗೇನಹಳ್ಳಿಯಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ೧೯೬೩ರಲ್ಲಿ ರಾಜ್ಯದ ಕೇಂದ್ರ ಬತ್ತ ಸಂಶೋಧನಾ ಕೇಂದ್ರವನ್ನಾಗಿ ಮೇಲ್ದರ್ಜೆಗೆ ಏರಿಸಲಾಯಿತು. ೧೯೬೫ರಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಈ ಕೇಂದ್ರವನ್ನು ಹಸ್ತಾಂತರಿಸಲಾಯಿತು. ಈ ಕೇಂದ್ರವನ್ನು ಮಧ್ಯಮ ಸಂಶೋಧನಾ ಕೇಂದ್ರವನ್ನಾಗಿ ಪರಿಗಣಿಸಲಾಯಿತು. ಈ ಕೇಂದ್ರದಲ್ಲಿ ೨೫ ಹೆ. ಪ್ರದೇಶ ಸಂಶೋಧನೆಗೆ ಲಭ್ಯವಿದ್ದು, ಅದರಲ್ಲಿ ೧೬ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವಿದೆ. ಸುಧಾರಿತ ಬತ್ತದ ಬೆಳೆಗಳ ಬೀಜೋತ್ಪಾದನೆ, ತಳಿಗಳ ಮತ್ತು ಬೇಸಾಯ ಪದ್ಧತಿಗಳ ಬಗ್ಗೆ ರೈತರಿಗೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು ಹಾಗೂ ಬೆಳೆಯ ಉತ್ಪಾದನೆ ವೆಚ್ಚದ ಬಗ್ಗೆ ಸಂಶೋಧನೆ ಕೈಗೊಳ್ಳುವುದು ಈ ಕೇಂದ್ರದ ಮುಖ್ಯ ಉದ್ದೇಶಗಳಾಗಿವೆ. ಕೃಷಿ ವಿಶ್ವವಿದ್ಯಾನಿಲಯದ ಕ್ರಮಬದ್ಧವಾದ ಸಂಶೋಧನೆಗಳೊಂದಿಗೆ ಖ್ಯಾತ ಸಂಶೋಧನಾ ಸಂಸ್ಥೆಗಳಾದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಐ.ಸಿ.ಎ.ಆರ್.), ಅಂತರಾಷ್ಟ್ರೀಯ ಬತ್ತ ಸಂಶೋಧನಾ ಸಂಸ್ಥೆ (ಐ.ಆರ್.ಆರ್.ಐ.) ಮತ್ತು ಕೇಂದ್ರೀಯ ಆಹಾರ ಮತ್ತು ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿ.ಎಫ್.ಟಿ.ಆರ್.ಐ.) ಮುಂತಾದ ಸಂಸ್ಥೆಗಳೊಂದಿಗೆ ಮುಖ್ಯ ಬೆಳೆಗಳ ಅಭಿವೃದ್ಧಿ ಮತ್ತು ಸುಧಾರಣೆಗಾಗಿ ಕೆಲವು ಸಂಘಟಿತ ಸಂಶೋಧನೆಗಳನ್ನು ಕೂಡ ಕೈಗೊಳ್ಳಲಾಗುತ್ತಿದೆ.

ರೇಷ್ಮೆ ಕೃಷಿಯನ್ನು ಹೈದರ್ ಅಲಿ ಹಾಗೂ ಟಿಪ್ಪುಸುಲ್ತಾನ್ ಕಾಲದಿಂದಲೂ ಅಭಿವೃದ್ಧಿಪಡಿಸುತ್ತಾ ಬರಲಾಗುತ್ತಿದೆ. ಆನಂತರ ಸರ್ ಎಂ. ವಿಶ್ವೇಶ್ವರಯ್ಯನವರ ಆಡಳಿತಾವಧಿಯಲ್ಲಿ (೧೯೧೪) ರೇಷ್ಮೆ ಕೃಷಿ ಇಲಾಖೆ ಕಾರ್ಯೋನ್ಮುಖವಾಯಿತು. ಈ ಉದ್ಯಮ ನಿರುದ್ಯೋಗ ನಿವಾರಣೆಯ ಹಾದಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ಕೇಂದ್ರ ಸರ್ಕಾರವು ೧೯೬೫ರಲ್ಲಿ ಕೇಂದ್ರ ರೇಷ್ಮೆ ಕೃಷಿ ಹಾಗೂ ಸಂಶೋಧನ ಕೇಂದ್ರವನ್ನು ಸ್ಥಾಪಿಸಿತು. ಇಲ್ಲಿ ರೇಷ್ಮೆ ಬೆಳೆಗೆ

ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ. ಮೈಸೂರಿನ ರೇಷ್ಮೆ ವಿಶ್ವವಿಖ್ಯಾತವಾಗಿದ್ದು, ರೇಷ್ಮೆ ಸೀರೆ, ಝರಿ, ಪೇಟ, ಧೋತಿಗಳು ಜನರ ಮನಸೆಳೆದಿವೆ.

ಕೃಷಿಗೆ ಸಂಬಂಧಿಸಿದಂತೆ ಮೈಸೂರು ತಾಲೂಕಿನಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಗಳಿದ್ದು ರೈತರಿಗೆ ಹೈಬ್ರಿಡ್ ತಳಿಗಳ ಆಧುನಿಕ ವ್ಯವಸಾಯ ಪದ್ಧತಿಗಳ ಬಗ್ಗೆ ತಿಳುವಳಿಕೆ ನೀಡಿ ಆಗ್ರೋ ಕೇಂದ್ರಗಳ ಮೂಲಕ ಸುಧಾರಿತ ಬಿತ್ತನೆ ಬೀಜ, ರಸಗೊಬ್ಬರಗಳನ್ನು ಒದಗಿಸಲಾಗುತ್ತಿದೆ.

## ನೀರಾವರಿ

ವ್ಯವಸಾಯಕ್ಕೆ ಅತ್ಯಾವಶ್ಯಕವಾದ ನೀರನ್ನು ಕೃತಕ ರೀತಿಯಲ್ಲಿ ಸರಬರಾಜು ಮಾಡುವ ವಿಧಾನವನ್ನು ನೀರಾವರಿ ಎನ್ನಲಾಗುತ್ತದೆ. ವರ್ಷದ ಕೆಲವೇ ತಿಂಗಳುಗಳಲ್ಲಿ ಮಾತ್ರ ಹೆಚ್ಚು ಮಳೆ ಬೀಳುತ್ತದೆಯಾದ್ದರಿಂದ ಇಲ್ಲಿ ದೊರೆಯುವ ನೀರು ಸಾಕಷ್ಟಿದ್ದರೂ ಅದು ವ್ಯರ್ಥವಾಗಿ ಹರಿದು ಹೋಗುವುದು, ವಿವಿಧ ಭಾಗಗಳಲ್ಲಿ ಬೀಳುವ ಮಳೆಯ ಪ್ರಮಾಣ ಅವಶ್ಯಕತೆಗಿಂತ ವ್ಯತ್ಯಾಸವಾಗಿರುವುದು, ಕೆಲವೆಡೆ ಅನಿಶ್ಚಿತವಾಗಿರುವುದು ಮುಂತಾದ ಕಾರಣಗಳಿಂದ ಉತ್ತಮ ನೀರಾವರಿ ವ್ಯವಸ್ಥೆಯನ್ನು ರೂಢಿಸಿಕೊಳ್ಳಲಾಯಿತು. ಇಂದು ಆಧುನಿಕ ವಿಜ್ಞಾನದ ಬೆಳವಣಿಗೆಯೊಡನೆ ಇನ್ನೂ ಹೆಚ್ಚು ವ್ಯಾಪಕವಾಗಿ ವ್ಯವಸ್ಥಿತವಾಗಿ ನೀರಾವರಿಯನ್ನು ರೂಢಿಸಲಾಗುತ್ತಿದೆ. ಮೈಸೂರು ಕೃಷಿ ಪ್ರಧಾನವಾದ ತಾಲೂಕಾಗಿದ್ದು, ಕೃಷಿ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವಹಿಸುತ್ತಾ ಬಂದಿದೆ. ತಾಲೂಕಿನ ಒಟ್ಟು ಸಾಗುವಳಿ ಪ್ರದೇಶದ ಬಹುಪಾಲು ಅಂದರೆ ಶೇಕಡ ೬೪ ರಷ್ಟು ಕ್ಷೇತ್ರ ಮಳೆಯಾಧಾರಿತ ಭೂಮಿಯಾಗಿರುತ್ತದೆ.

ಮೈಸೂರು ತಾಲೂಕಿನಲ್ಲೂ ಹಿಂದಿನಿಂದಲೂ ಪ್ರಧಾನವಾಗಿ ಕೆರೆ, ಬಾವಿ, ನದಿಗಳ ಮೂಲಕ ಕೃಷಿಗೆ ನೀರಾವರಿಯನ್ನು ಬಳಸಿಕೊಳ್ಳಲಾಗುತ್ತಿದೆ. ನೀರಾವರಿ ಸಾಧನಗಳೆನಿಸಿದ್ದ ಕಾಲುವೆ, ಕೆರೆಕಟ್ಟೆ ಹಾಗೂ ಬಾವಿಗಳನ್ನು ಕಟ್ಟಿಸುವುದು ಅತಿ ಪುಣ್ಯದ ಕೆಲಸವಾಗಿತ್ತು. ಇದರಿಂದ ಜನತೆಗೆ ಶ್ರೇಯಸ್ಕರವಾಗುವುದು ಮಾತ್ರವಲ್ಲದೆ, ದೇವತೆಗಳೂ ಸುಪ್ರೀತರಾಗುತ್ತಾರೆಂಬ ನಂಬಿಕೆ ಜನಮನದಲ್ಲಿ ಆಳವಾಗಿ ಬೇರೂರಿದ್ದಿತು. ಅಂತೆಯೇ ರಾಜರು, ರಾಜ್ಯಾಧಿಕಾರಿಗಳು, ಶ್ರೀಮಂತರಲ್ಲದೆ ಸ್ತ್ರೀಯರು ಹಾಗೂ ಸನ್ಯಾಸಿಗಳೂ ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗಿದ್ದರು.

ಕಾವೇರಿನದಿಗೆ ೧೯೩೨ರಲ್ಲಿ ಅಡ್ಡಲಾಗಿ ೨,೬೨೧ ಮೀ. ಉದ್ದ ೪೩ಮೀ. ಎತ್ತರದ ಕನ್ನಂಬಾಡಿ ಕಟ್ಟೆಯನ್ನು ನಿರ್ಮಿಸಿ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ೭೯,೮೦೦ ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಯಿತು. ಈ ಯೋಜನೆ ಪೂರ್ಣಗೊಂಡ ಬಳಿಕ ಮೈಸೂರು ತಾಲೂಕಿನ ೧೮,೨೩೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದ್ದು ೨೦೦೭-೦೮ರಲ್ಲಿ ತಾಲೂಕಿನ ೧೦,೦೦೦ ಹೆಕ್ಟೇರು ಭೂಮಿಗೆ ನೀರಾವರಿಯನ್ನು ಒದಗಿಸಲಾಗಿದೆ.

ತಾಲೂಕಿನ ಪೂರ್ವದಂಚಿನಲ್ಲಿ ಕಪಿಲಾನದಿ ಸ್ವಲ್ಪ ದೂರ ಹರಿಯುತ್ತದೆ. ಇದಕ್ಕೆ ಹೆಗ್ಗಡದೇವನಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿ ನಿರ್ಮಿಸಿರುವ ಅಣೆಕಟ್ಟೆಯಿಂದ ಮೈಸೂರು ತಾಲೂಕಿನ ೩,೦೦೦ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಜೊತೆಗೆ ತಾಲೂಕಿನಲ್ಲಿ ಕೆರೆ, ಬಾವಿಗಳಿದ್ದು ನೀರಾವರಿಗೆ ಆಸರೆಯಾಗಿವೆ. ೨೦೦೪–೦೫ರ ಅಂಕಿ ಅಂಶಗಳಂತೆ ಮೈಸೂರು ತಾಲೂಕು ಕಾಲುವೆಗಳಿಂದ ೬೫೦೦ ಹೆಕ್ಟೇರ್, ಕೆರೆಗಳಿಂದ ೨೧೫೦ ಹೆಕ್ಟೇರ್, ಬಾವಿಗಳಿಂದ ೨೫೦ ಹೆಕ್ಟೇರ್, ಕೊಳವೆಬಾವಿಗಳಿಂದ ೩೫೦೦ ಹೆಕ್ಟೇರ್ ಅಂದರೆ, ಒಟ್ಟು ೧೨೪೧೦ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ.

ಮೈಸೂರು ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳಿಗೆ ನೀರಾವರಿಯನ್ನು ವಿವಿಧ ಮೂಲಗಳಿಂದ ಪಡೆದುಕೊಳ್ಳಲಾಗಿದೆ. ಕಳೆದ ಐದು ವರ್ಷಗಳಲ್ಲಿ ನೀರಾವರಿ ಸೌಲಭ್ಯದ ಹಂಚಿಕೆಯನ್ನು ಈ ಕೆಳಗಿನಂತೆ ಕಾಣಬಹುದು.

| ಮೂಲಗಳು | ೧೯೯೯–೦೦ ಹೆಕ್ಟೇರ್ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ |
|---|---|---|---|---|---|---|
| ಕಾಲುವೆ | ೩೩೩೯ | ೩೪೪೧ | ೪೧೦೪ | ೩೨೫೬ | ೩೮೮೬ | ೬೫೦೦ |
| ಕೆರೆ | ೭೯೧ | ೮೪೮ | ೧೭೧೨ | ೨೦೨೬ | ೧೧೯೦ | ೨೧೦೦ |
| ಬಾವಿ | ೧೭೭೭ | ೨೦೬೦ | ೩೦೦೦ | ೨೫೦೦ | ೩೦೦ | ೨೫೦ |
| ಕೊಳವೆ ಬಾವಿ | ೧೫೯ | ೧೬೦ | ೧೧೦ | ೧೨೫೦ | ೨೨೩೬ | ೩೫೦೦ |
| ಏತ ನೀರಾವರಿ | – | – | ೧೦ | ೧೦ | ೮ | ೧೦ |
| **ಒಟ್ಟು** | **೬೦೬೬** | **೬೫೦೯** | **೮೯೪೧** | **೯೦೪೨** | **೭೬೨೦** | **೧೨೪೧೦** |

ತಾಲೂಕಿನಲ್ಲಿ ೨೦೦೭–೦೮ನೇ ಸಾಲಿನಲ್ಲಿ ಒಟ್ಟು ೧೪,೨೮೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು, ಇದರಲ್ಲಿ ಕೆರೆಗಳಿಂದ ೨,೪೦೦ ಹೆ., ಕಾಲುವೆಗಳಿಂದ ೧೦,೧೭೦ ಹೆ., ಬಾವಿಗಳಿಂದ ೩೦೦ ಹೆ. ಹಾಗೂ ಕೊಳವೆ ಬಾವಿಗಳಿಂದ ೧,೪೦೦ ಹೆ.ಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ೧,೫೯,೧೪೩ ಹೆ. ನೀರಾವರಿ ಪ್ರದೇಶವಿದ್ದು, ತಾಲೂಕಿನ ಪಾಲು ಶೇ. ೮.೯೮ರಷ್ಟು ಮಾತ್ರ. ಕಾಲುವೆಗಳಿಂದ ಜಿಲ್ಲೆಯಲ್ಲಿ ೧,೦೮,೭೯೦ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಿದ್ದು, ತಾಲೂಕಿನಲ್ಲಿ ಜಿಲ್ಲೆಯ ಪ್ರದೇಶದ ಶೇ. ೯.೩೫ರಷ್ಟು ಪ್ರದೇಶವು ಕಾಲುವೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ತಾಲೂಕಿನ ಒಟ್ಟು ನೀರಾವರಿ ಪ್ರದೇಶದಲ್ಲಿ ಕಾಲುವೆಗಳಿಂದ ಶೇ. ೭೧.೧೯, ಕೆರೆಗಳಿಂದ ಶೇ. ೧೬.೮, ಕೊಳವೆ ಬಾವಿಗಳಿಂದ ಶೇ. ೯.೮ ಹಾಗೂ ಬಾವಿಗಳಿಂದ ಕೇವಲ ಶೇ. ೨.೧ ರಷ್ಟು ನೀರಾವರಿ ಸೌಲಭ್ಯ ಒದಗಿಸಲಾಗಿದೆ. ತಾಲೂಕಿನ ನಿವ್ವಳ ಬಿತ್ತನೆಯಾದ ೩೯,೩೩೭ ಹೆ. ಪ್ರದೇಶದಲ್ಲಿ ೧೪,೨೮೫ ಹೆ. ನಿವ್ವಳ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಇದು ಶೇ. ೩೬.೩ರಷ್ಟಾಗುತ್ತದೆ. ಈ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೬.೬ರಷ್ಟಿದ್ದು, ಜಿಲ್ಲೆಯ ಶೇಕಡಾವಾರು ನೀರಾವರಿಯಾದ

ಪ್ರಮಾಣಕ್ಕಿಂತ ಕಡಿಮೆ ಪ್ರಮಾಣ ತಾಲೂಕಿನದ್ದಾಗಿದೆ. ತಾಲೂಕಿನ ಒಟ್ಟು ಬಿತ್ತನೆಯಾದ ೭೪,೮೧೭ ಹೆ. ಪ್ರದೇಶದಲ್ಲಿ ೧೪,೨೮೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಏತ ನೀರಾವರಿಯಿಂದ ಕೇವಲ ೧೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಲಭ್ಯವಿದೆ.

ಮುಂಗಾರಿನಲ್ಲಿ ಬಹುತೇಕ ಮುಖ್ಯ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ಅದರಲ್ಲೂ ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳು ಮಳೆಯನ್ನು ಆಶ್ರಯಿಸಿದ್ದು, ಅಕಾಲಿಕ ಹಾಗೂ ಅಸಮರ್ಪಕ ಮಳೆ ಹಾಗೂ ತೇವಾಂಶದ ಕೊರತೆಯಿಂದ ನಿರೀಕ್ಷಿಸಿದ ಇಳುವರಿ ದೊರೆಯದೇ, ಇಳುವರಿ ಕಡಿಮೆಯಾಗಿ ಅನೇಕ ವೇಳೆ ಬರಗಾಲ ಅನುಭವಿಸಬೇಕಾಗಿದೆ. ಅನೇಕ ವೇಳೆ ಹೆಚ್ಚಿನ ಮಳೆಯಾಗಿ ಭೂಮಿಯಲ್ಲಿ ನೀರು ಇಂಗದೇ, ಹರಿದು ಪೋಲಾಗುತ್ತಿದೆ. ಜೊತೆಗೆ ಭೂಸವಕಳಿಯೂ ಉಂಟಾಗುತ್ತದೆ. ಜೊತೆಗೆ ತೋಡುಬಾವಿ ಹಾಗೂ ಕೊಳವೆ ಬಾವಿಗಳಿಂದಾಗಿ ಅಂತರ್ಜಲ ಮಟ್ಟವೂ ಕುಸಿದಿದ್ದು, ಪರಿಸರ ಮಾಲಿನ್ಯದಿಂದ ಕಲುಷಿತಗೊಂಡಿದೆ. ಆದ್ದರಿಂದ, ಈ ಪೋಲಾಗುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಹಾಗೂ ಅಂತರ್ಜಲ ಹೆಚ್ಚಿಸುವ ನಿಟ್ಟಿನಲ್ಲಿ ಜಲಾನಯನ ಆಧಾರಿತ ಕಾಮಗಾರಿ ಹಾಗೂ ಕೃಷಿಯನ್ನು ಅಳವಡಿಸಿ ಗುಣಾತ್ಮಕ ಸಾಧನೆ ಮಾಡಲು ಜಲಾನಯನ ಇಲಾಖೆಯನ್ನು ೧-೪-೨೦೦೦ ರಿಂದ ಕೃಷಿ, ಅರಣ್ಯ ಹಾಗೂ ತೋಟಗಾರಿಕಾ ಘಟಕಗಳ ಸಂಯೋಜನೆಯೊಂದಿಗೆ ಪ್ರಾರಂಭಿಸಲಾಗಿದೆ. ಒಣಭೂಮಿಯಿಂದ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ಸಾಮಾಜಿಕ ಅವಶ್ಯಕತೆಗಳಾದ ಆಹಾರ, ಉರುವಲು, ಸೌದೆ, ಜಾನುವಾರು ಮೇವು ಮತ್ತು ನೀರನ್ನು ಸಂರಕ್ಷಿಸುವುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ಅವಶ್ಯಕ ಸಂಪನ್ಮೂಲಗಳಾದ ಮಣ್ಣು ಮತ್ತು ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಮಗ್ರ ಜಲಾನಯನ ಅಭಿವೃದ್ಧಿ ತತ್ವವನ್ನು ಅಳವಡಿಸಲಾಗುತ್ತಿದೆ. ನೀರಿನ ಹರಿಯುವಿಕೆಯ ಆಧಾರದ ಮೇಲೆ ಜಲಾನಯನ ಪ್ರದೇಶವನ್ನು ವಿಂಗಡಣೆ ಮಾಡಿ ಮಣ್ಣು, ನೀರು ಮತ್ತು ಸಸ್ಯ ಸಂಪತ್ತನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಮಾಡಿ ಕೃಷಿ, ಅರಣ್ಯ ಮತ್ತು ತೋಟಗಾರಿಕಾ ಬೆಳೆ ಉತ್ಪಾದನೆಯನ್ನು ಹೆಚ್ಚಿಸಲಾಗುತ್ತಿದೆ. ಕೃಷಿ ಕಾರ್ಮಿಕರಿಗೆ ಕೆಲಸ ನೀಡಲಾಗುತ್ತಿದೆ.

## ತೋಟಗಾರಿಕೆ

ಮೈಸೂರು ತಾಲೂಕು ತೋಟಗಾರಿಕೆಗೆ ಸೂಕ್ತ ಹವಾಮಾನವನ್ನು ಹೊಂದಿದೆ. ರೈತರು ತೋಟಗಾರಿಕೆಬೆಳೆ ಬೆಳೆಯಲು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಪ್ರತಿ ವರ್ಷ ತೋಟಗಾರಿಕೆ ಬೆಳೆಯ ವಿಸ್ತೀರ್ಣ ಗಣನೀಯವಾಗಿ ಹೆಚ್ಚುತ್ತಿದೆ. ತೋಟಗಾರಿಕೆ ಬೆಳೆಗಳನ್ನು ಪ್ರೋತ್ಸಾಹಿಸಲು ಜಿಲ್ಲಾ ಪಂಚಾಯತ್ ವತಿಯಿಂದ ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ, ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ, ತೋಟಗಾರಿಕೆ ಬೆಳೆಗಳ ಪ್ರಚಾರ, ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳು, ತೋಟಗಾರಿಕೆ ಕಟ್ಟಡಗಳ ನಿರ್ಮಾಣ

ರೈತರಿಗೆ ತರಬೇತಿ, ಅಲಂಕಾರಿಕ ಗಿಡಗಳ ಅಭಿವೃದ್ಧಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ರೈತರಿಗೆ ಸಹಾಯ ಶೇ.೫೦ ರಷ್ಟು ರಿಯಾಯಿತಿಯಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ರಾಸಾಯನಿಕ ಸರಬರಾಜು ಮುಂತಾದವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೈಸೂರು ವೀಳ್ಯದೆಲೆಗೆ ಪ್ರಸಿದ್ಧವಾಗಿದ್ದು, ಮೈಸೂರು ಮಲ್ಲಿಗೆ ತನ್ನದೇ ಆದ ಸುವಾಸನೆಯಿಂದ ಖ್ಯಾತಗೊಂಡಿದೆ. ಮೈಸೂರು ಎಂದರೆ ಮೈಸೂರು ಮಲ್ಲಿಗೆ ನೆನಪಿಗೆ ಬರುತ್ತದೆ. ಇಲ್ಲಿನ ಹವಾಗುಣ, ಮಣ್ಣಿನ ಮಹಿಮೆಯೇ ಏನೋ ಎನ್ನುವಂತೆ ಇತರೆಡೆಗಿಂತ ಇಲ್ಲಿನ ಮಲ್ಲಿಗೆ ಹೆಚ್ಚು ಪರಿಮಳ. ಹಾಗಾಗಿಯೇ ಈ ಭಾಗದಲ್ಲಿ ಹೆಚ್ಚು ಪ್ರಸಿದ್ಧಿಯ ಜತೆಗೆ ತನ್ನದೇ ಛಾಪು ಮೂಡಿಸಿದೆ. ಅರಸರ ಕಾಲದಿಂದಲೂ ಇದರ ವರ್ಣನೆ, ವಿವರಣೆ ಸಿಗುತ್ತವೆ. ದಸರಾ ಸಮಯದಲ್ಲಂತೂ 'ಮಲ್ಲಿಗೆ' ಹೂವಿನ ರಾಜನಾಗಿ ಮೆರೆಯುತ್ತದೆ. ನಗರವೂ ಸೇರಿದಂತೆ ತಾಲೂಕಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರೈತರು ತಮ್ಮ ಗದ್ದೆ ತೋಟಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತಿದ್ದರು. ಇತ್ತೀಚೆಗೆ ಮಲ್ಲಿಗೆ ಕಂಪು ಕಮರುತ್ತಿದೆ. ಈಗ ನಗರೀಕರಣದಿಂದಾಗಿ ಕೃಷಿ ಭೂಮಿಯೂ ನಿವೇಶನಗಳಾಗಿ ಪರಿವರ್ತಿತಗೊಂಡು ಮಲ್ಲಿಗೆ ಬೆಳೆಯುವ ಪ್ರದೇಶ ಗಣನೀಯವಾಗಿ ಕುಗ್ಗಿದೆ. ಅಲ್ಪಪ್ರಮಾಣದಲ್ಲಿ ಮೈಸೂರು ಮಲ್ಲಿಗೆಯನ್ನು ಹೆಚ್.ಡಿ.ಕೋಟೆ, ಹುಣಸೂರು ಸುತ್ತಮುತ್ತಲಿನ ಭಾಗದಲ್ಲಿ ಬೆಳೆಯಲಾಗುತ್ತಿದೆ. ಹಿಂದೆ ಮಾರುಕಟ್ಟೆಗೆ ಸಾವಿರಾರು ಕೆ.ಜಿ.ಗಳಷ್ಟು ಮಲ್ಲಿಗೆ ಬರುತ್ತಿದ್ದುದು ಈಗ ದಿನಕ್ಕೆ ೨೦ ರಿಂದ ೩೦ ಕೆ.ಜಿ.ಗಳಿಗೆ ತಲುಪಿದೆ. ಫೆಬ್ರವರಿಯಿಂದ ಅಕ್ಟೋಬರ್ ಮಲ್ಲಿಗೆಯ ಕಾಲ. ಮದುವೆ, ಹಬ್ಬಹರಿದಿನಗಳಲ್ಲಿ ಬೆಲೆ ದುಬಾರಿ. ಪ್ರಸ್ತುತ ಮೈಸೂರು ಮಲ್ಲಿಗೆ ಬೆಳೆಯುವ ರೈತರ ಸಂಖ್ಯೆ ಕೈಬೆರಳೆಣಿಕೆಯಷ್ಟಕ್ಕೆ ಇಳಿದಿದೆ. ಹಾಗೆಯೇ ಸುಗಂಧರಾಜ, ಕಾಕಡ, ಕನಕಾಂಬರ, ಚೆಂಡುಹೂ ಮುಂತಾದ ಹೂವುಗಳನ್ನು ಬೆಳೆಯಲಾಗುತ್ತಿದೆ.

ತಾಲೂಕಿನಲ್ಲಿ ೨೦೦೮-೦೯ರಲ್ಲಿ ಪ್ರಮುಖ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವನ್ನು ಹೆಕ್ಟೇರುಗಳಲ್ಲಿ ಹಾಗೂ ಉತ್ಪಾದನೆಯನ್ನು ಮೆಟ್ರಿಕ್ ಟನ್ನುಗಳಲ್ಲಿ ಆವರಣದಲ್ಲಿ ನೀಡಿದೆ.

ಹಣ್ಣಿನ ಬೆಳೆಗಳು ೮೮೮ (೧೪,೮೮೦), ತರಕಾರಿ ಬೆಳೆಗಳು ೧,೯೫೪ (೪೪,೩೮೫), ಸಾಂಬಾರ ಬೆಳೆಗಳು ೧೫೦ (೫೨೭), ತೋಟದ ಬೆಳೆಗಳು ೪,೫೬೨ (೫೩), ಒಟ್ಟು ತೋಟಗಾರಿಕೆ ಬೆಳೆಗಳು ೭,೫೫೪ (೫೯,೮೪೫), ಮಾವು ೪೫೦ (೪,೫೦೦), ಪಚ್ಚಬಾಳೆ ೧೫೦ (೪,೫೦೦), ಇತರೆ ಜಾತಿ ಬಾಳೆ ೨೦೦ (೫,೦೦೦), ಒಟ್ಟು ಬಾಳೆ ೩೫೦ (೯,೫೦೦), ಸೀಬೆ ೮ (೮೦), ಸಪೋಟ ೮೦ (೮೦೦), ಟೊಮ್ಯಾಟೋ ೯೮೦ (೨೪,೫೦೦), ಹಸಿರು ಮೆಣಸಿನಕಾಯಿ ೬೦ (೯೦೦), ಹುರಳಿಕಾಯಿ ೫೦ (೫೦೦), ಮೆಣಸು ೨೮ (೩೪), ಶುಂಠಿ ೧೫ (೧೫), ತೆಂಗು ೪,೫೦೯ (೫೪೧ ಲಕ್ಷ ಕಾಯಿಗಳು) ಹಾಗೂ ಅಡಿಕೆ ೨೫ (೩೦).

## ಪಶುಪಾಲನೆ

ಮೈಸೂರು ತಾಲೂಕಿನಲ್ಲಿ ದನ, ಎಮ್ಮೆ, ಕುರಿ, ಮೇಕೆ, ಹಂದಿ, ಕೋಳಿ ಮುಂತಾದ ಜಾನುವಾರುಗಳನ್ನು ಆಹಾರ ಉತ್ಪಾದನೆ ಹಾಗೂ ಕೃಷಿ ಕೆಲಸಗಳಿಗಾಗಿ ಬಳಸಲಾಗುತ್ತಿದೆ. ವ್ಯವಸಾಯದಲ್ಲಿ ಸ್ವಲ್ಪ ಮಟ್ಟಿಗೆ ಯಾಂತ್ರಿಕತೆ ಸಾಧ್ಯವಾಗಿದ್ದರೂ ಜಾನುವಾರುಗಳ ಕಾರ್ಯಶಕ್ತಿಯೇ ಕೃಷಿ ಕಾರ್ಯಗಳಿಗೆ ಮುಖ್ಯ ಚಾಲನಾ ಶಕ್ತಿಯಾಗಿದೆ. ಪ್ರಾಚೀನ ಕಾಲದಿಂದಲೂ ಪಶುಸಂಪತ್ತನ್ನು ಆರ್ಥಿಕ ಸಂಪನ್ಮೂಲವೆಂದು ಭಾವಿಸಲಾಗಿದೆ. ದನಗಳ ಮತ್ತೊಂದು ಮುಖ್ಯ ಉಪಯೋಗವೆಂದರೆ ಹಾಲಿನ ಪೂರೈಕೆ. ಹಾಲು, ಮಾಂಸ ಮತ್ತು ಮೊಟ್ಟೆಗಳ ಲಭ್ಯತೆ ಬಹಳ ಕಡಿಮೆಯಿರುವುದರಿಂದ ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಪಡಿಸುವುದು ಬಹುಮುಖ್ಯ. ಈಗಾಗಲೇ ಸಾಕಷ್ಟು ಹೆಚ್ಚಾಗಿರುವ ಜಾನುವಾರುಗಳಿಗೆ ಉತ್ತಮ ಹಾಗೂ ಪೌಷ್ಟಿಕ ಮೇವು ನೀಡುವುದರ ಮೂಲಕ ಅವುಗಳ ಉತ್ಪನ್ನಗಳನ್ನು ಹೆಚ್ಚಿಸಬೇಕಾಗಿದೆ. ಜಾನುವಾರುಗಳ ಗೊಬ್ಬರ ಕೃಷಿಗೆ ಅವಶ್ಯಕವಾಗಿದೆ. ಇದು ಮಣ್ಣಿನ ರಚನೆಯನ್ನು ಉತ್ತಮಗೊಳಿಸಲು, ಮಣ್ಣಿನ ನೀರು ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಆದ್ದರಿಂದಲೇ ಜಾನುವಾರುಗಳ ಗೊಬ್ಬರವನ್ನು ಮಣ್ಣಿನ ಜೀವಾಳ ಎಂದು ಕರೆಯುವರು. ಕೋಳಿಗೊಬ್ಬರ ಎಲ್ಲಕ್ಕಿಂತ ಅತ್ಯಂತ ಬೆಲೆಬಾಳುವ ಗೊಬ್ಬರ.

ತಾಲೂಕಿನಲ್ಲೂ ವಿವಿಧ ತಳಿಯ ದನಗಳನ್ನು ಕಾಣಬಹುದು. ಆದರೆ ಹಳ್ಳಿಕಾರ್ ತಳಿದನಗಳು ಇಲ್ಲಿ ಹೆಚ್ಚು ಪ್ರಸಿದ್ಧವಾಗಿವೆ. ಸಾರಿಗೆ ಹಾಗೂ ಕೃಷಿ ಕೆಲಸಗಳೆರಡಕ್ಕೂ ಹಳ್ಳಿಕಾರ್ ತಳಿ ಉಪಯುಕ್ತವೆನಿಸಿದೆ. ಬೂದುಬಣ್ಣ ಸಾಮಾನ್ಯವಾಗಿದ್ದು, ಭುಜ ಹಾಗೂ ಚಪ್ಪೆಯ ಮೇಲೆ ಬಣ್ಣ ಸ್ವಲ್ಪ ದಟ್ಟವಾಗಿರುತ್ತದೆ. ನೀಳವಾದ ಕತ್ತು, ಕಾಲುಗಳು ಬಲವಾಗಿದ್ದು ಪರಸ್ಪರ ದೂರವಾಗಿರುತ್ತವೆ. ತಲೆ ಉದ್ದವಿದ್ದು, ತುದಿಯಲ್ಲಿ ಚೂಪಾಗಿರುತ್ತದೆ. ಹಣೆ ಸ್ವಲ್ಪ ಉಬ್ಬಿದ್ದು ಅದರ ಮಧ್ಯ ಒಂದು ಕಾಲುವೆಯಂತಹ ತಗ್ಗು ಇರುತ್ತದೆ. ಕೊಂಬುಗಳು ಉದ್ದ ಹಾಗೂ ಚೂಪು. ಕತ್ತಿನ ಮೇಲೆ ಹಿಂದಕ್ಕೆ ಹಾಗೂ ಸ್ವಲ್ಪ ಮೇಲಕ್ಕೆ ಬಗ್ಗಿದಂತಿವೆ. ಕೆಚ್ಚಲು ಚಿಕ್ಕದು, ಹಾಲಿನ ಉತ್ಪಾದನೆ ಕಡಿಮೆ.

ಇದರ ಜೊತೆಗೆ ಅಮೃತಮಹಲ್, ಖಿಲಾರಿ, ಆಲಂಬಾಡಿ, ದೇವನಿ, ಕೃಷ್ಣಕೊಳ್ಳ ಮುಂತಾದ ತಳಿಗಳ ಜೊತೆಗೆ ಮಿಶ್ರತಳಿದನಗಳೂ ಜನಪ್ರಿಯವಾಗುತ್ತಿವೆ. ಮಿಶ್ರತಳಿ ದನಗಳನ್ನು ಹೊರದೇಶದ ತಳಿಗಳಾದ ಜರ್ಸಿ, ಹಾಲ್‌ಸ್ಟೀನ್, ರೆಡ್‌ಡೇನ್ ತಳಿಗಳೊಂದಿಗೆ ಕಸಿಮಾಡಿ ಈ ತಳಿಯನ್ನು ಉತ್ತಮಗೊಳಿಸಲಾಗಿದೆ. ಮಿಶ್ರತಳಿ ಹಸು ದಿನಕ್ಕೆ ಸರಾಸರಿ ೧೦ ಲೀಟರ್ ಹಾಲು ಕೊಡುತ್ತದೆ. ಈ ತಳಿಯ ಜಾನುವಾರುಗಳ ಒಂದೇ ಕೊರತೆಯೆಂದರೆ ಅವುಗಳ ನಿಧಾನ ಪ್ರವೃತ್ತಿ ಹಾಗೂ ಬಿಸಿಲು ಕಾಲದಲ್ಲಿ ಮಧ್ಯಾಹ್ನದ ಹೊತ್ತು ಸ್ವಲ್ಪ ವಿಶ್ರಾಂತಿ ಬೇಕಾಗುತ್ತದೆ.

**ಎಮ್ಮೆಗಳು:** ಸ್ಥಳೀಯ ಎಮ್ಮೆಗಳು ಗಾತ್ರದಲ್ಲಿ ಕಿರಿದಾಗಿದ್ದು, ಸುಮಾರಾಗಿ ಹಾಲು ಕೊಡುತ್ತವೆ. ಕೃತಕ ಗರ್ಭಧಾರಣೆ ವಿಧಾನ ಹಾಗೂ ಮುರ್ರ ಮತ್ತು ಸುರ್ತಿ ತಳಿಗಳಿಂದ ಮಿಶ್ರತಳಿ ಎಮ್ಮೆಗಳನ್ನು ಉತ್ತಮಗೊಳಿಸಲಾಗಿದೆ. ಅಲ್ಲದೆ ಕುರಿ, ಮೇಕೆ, ಹಂದಿ, ಕೋಳಿ, ಮೊಲ ಮುಂತಾದ ಜಾನುವಾರುಗಳನ್ನು ತಾಲೂಕಿನಲ್ಲಿ ಸಾಕಲಾಗುತ್ತಿದೆ.

**೨೦೦೨ರ ಜಾನುವಾರು ಗಣತಿ ವಿವರ :** ಸ್ಥಳೀಯ ತಳಿಗಳು ೩೯,೭೨೮, ವಿದೇಶಿ ತಳಿ ೬೫, ಮಿಶ್ರತಳಿ ೨೧,೫೮೯ ಸೇರಿ ಒಟ್ಟು ೬೧,೩೮೨. ಎಮ್ಮೆಗಳು: ೬,೬೨೮. ಕುರಿಗಳು: ಸ್ಥಳೀಯ ತಳಿ ೩೮,೧೫೪, ವಿದೇಶಿ ತಳಿ ೬, ಮಿಶ್ರತಳಿ ೧೫೪, ಒಟ್ಟು ೩೮,೩೧೪. ಮೇಕೆಗಳು: ೧೯,೩೬೯, ಹಂದಿಗಳು: ಸ್ಥಳೀಯ ತಳಿ ೪೨೫, ವಿದೇಶಿ ತಳಿ ೦೫, ಒಟ್ಟು ೪೩೦, ಮೊಲಗಳು: ೧೨೦, ನಾಯಿಗಳು : ೨೫,೪೮೯ ಇತರೆ: ೫೦, ಒಟ್ಟು ಜಾನುವಾರುಗಳು : ೧,೫೧,೭೮೨. ಕೋಳಿ ಸಾಕಾಣಿಕೆ ತಾಲೂಕಿನ ಪ್ರಮುಖ ಕಸುಬಾಗಿದ್ದು ೧೨,೮೬,೨೦೩ ಕುಕ್ಕುಟಗಳಿವೆ.

೨೦೦೭ರ ಜಾನುವಾರು ಗಣತಿ(ತಾತ್ಕಾಲಿಕ)ಯಂತೆ ತಾಲೂಕಿನಲ್ಲಿ ೬೮,೬೩೨ ದನಕರುಗಳು, ೫,೦೫೩ ಎಮ್ಮೆಗಳು, ೪೬,೮೫೩ ಕುರಿಗಳು, ೨೦,೧೪೪ ಮೇಕೆಗಳು, ೨೧೪ ಹಂದಿಗಳು, ೫೧ ಮೊಲಗಳು, ೧೫,೬೫೦ ನಾಯಿಗಳು, ೧೬೨ ಇತರೆ ಜಾನುವಾರುಗಳು ಹಾಗೂ ೧,೫೬,೭೫೯ ಒಟ್ಟು ಜಾನುವಾರುಗಳಿದ್ದು, ೨೧,೨೪,೬೮೪ ಕೋಳಿಗಳಿವೆ. ಆರು ಪಶುವೈದ್ಯ ಆಸ್ಪತ್ರೆಗಳು, ೧೦ ಚಿಕಿತ್ಸಾಲಯಗಳು, ೧೨ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಒಂದು ಸಂಚಾರಿ ಪಶುಚಿಕಿತ್ಸಾಲಯ, ಹೀಗೆ ಒಟ್ಟು ೨೯ ಪಶುವೈದ್ಯ ಸಂಸ್ಥೆಗಳು ತಾಲೂಕಿನಲ್ಲಿ ಜಾನುವಾರುಗಳ ಆರೋಗ್ಯ ರಕ್ಷಣೆ ಮಾಡುವ ಕಾರ್ಯದಲ್ಲಿ ನಿರತವಾಗಿವೆ.

ತಾಲೂಕಿನ ಪ್ರಮುಖ ಗ್ರಾಮಗಳಲ್ಲಿ ಹೆಚ್ಚಿನ ಹಾಲನ್ನು ಸಂಗ್ರಹಿಸುವ ಸಲುವಾಗಿ ಸರಕಾರಿ ಡೇರಿ ಮತ್ತು ಗ್ರಾಮೀಣ ಹೈನುಕೇಂದ್ರಗಳನ್ನು ಪಶು ಸಂಗೋಪನಾ ಇಲಾಖೆಯೂ ಪ್ರಾರಂಭಿಸಿದೆ. ಇದರಿಂದ ಉತ್ಪಾದಕರ ಕಾಲ ಹಾಗೂ ಹಣದ ನಷ್ಟವಿಲ್ಲದೆ ಹಾಲನ್ನು ನೇರವಾಗಿ ಶೈತ್ಯಗಾರದಲ್ಲಿ ಸಂಗ್ರಹಿಸಲಾಗುತ್ತಿದೆ. ಹಾಲಿನ ಉತ್ಪಾದನೆ ಹೆಚ್ಚಿಸಲು ಹಾಲು ಸಹಕಾರಿ ಸಂಘಗಳ ಸದಸ್ಯರುಗಳಿಗೆ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನೂ ಒದಗಿಸಲಾಗುತ್ತಿದೆ.

## ಮೀನುಗಾರಿಕೆ

ಮೀನು ಉದ್ಯಮವನ್ನು ತಾಲೂಕಿನಾದ್ಯಂತ ಅಲ್ಲಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ೨೦೦೫ರಲ್ಲಿ ತಾಲೂಕಿನಲ್ಲಿ ಹಿಡಿದ ಮೀನುಗಳು ೮೯೦.೪೬ ಮೆಟ್ರಿಕ್ ಟನ್‌ಗಳು. ೨೦೦೮–೯ನೇ ಸಾಲಿನಲ್ಲಿ ೭೯೬.೩೭ ಮೆಟ್ರಿಕ್ ಟನ್ನು ಮೀನು ಉತ್ಪಾದನೆಯಾಗಿದೆ. ತಾಲೂಕಿನಲ್ಲಿ ೩೬.೪ ಮೆಟ್ರಿಕ್ ಟನ್ ಸಾಮರ್ಥ್ಯದ ಏಳು ಮಂಜುಗಡ್ಡೆ ಕಾರ್ಖಾನೆಗಳು ಹಾಗೂ ೧೨ ಮೆಟ್ರಿಕ್ ಟನ್ ಸಾಮರ್ಥ್ಯದ ಎರಡು ಶಿಥಿಲೀಕರಣ ಕೇಂದ್ರಗಳಿವೆ.